ESI.A.No.24/2021
AW-1,

ದಿನಾಂಕಃ 01-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. SWK ವಕೀಲರಿಂದ

2012-13 ರಲ್ಲಿ ಲೇಬರ್ ಕಾಂಟ್ರಾಕ್ಟ ಕೆಲಸ ಮಾಡಬೇಕೆಂದು ಲೈಸನ್ಸನ್ನು ಪಡೆದುಕೊಂಡಿದ್ದೆ. ಆನಂತರ ನಾನು ಸ್ವತಃ ಇ ಎಸ್ ಐ ಕೋಡ್ ಪಡೆಯಲು ಅರ್ಜಿ ಕೊಟ್ಟೆ ಎಂದರೆ ನಿಜ. ಇ ಎಸ್ ಐ ಕೋಡ್ ಪಡೆಯಬೇಕಾದರೆ ನಾನು 10 ಜನ ಕಾರ್ಮಿಕರು ಇದ್ದಾರೆ ಎಂದು ತೋರಿಸಿದ್ದೆ ಎಂದರೆ ನಿಜ. ಸಾಕ್ಷಿಯು ಕೋಡ್ ನಂಬರ್ ಪಡೆಯಬೇಕಾದರೆ 10 ಜನ ಕೆಲಸಗಾರರು ಇದ್ದಾರೆ ಎಂದು ತೋರಿಸುವುದು ಕಡ್ಡಾಯ ಎಂದು ಹೇಳಿದ್ದರಿಂದ ತೋರಿಸಿದ್ದೇನೆ ಎಂದು ನುಡಿಯುತ್ತಾರೆ. ಅದೇರೀತಿಯಲ್ಲಿ ಪಿ ಎಫ್ ಕೋಡ್ ಕೂಡ ಪಡೆದುಕೊಂಡಿದ್ದೇನೆ ಎಂದರೆ ನಿಜ. ನಮ್ಮ ಮನೆಯ ಪಕ್ಕದಲ್ಲಿ ಅಂಗಡಿ ಇದೆ ಅಲ್ಲಿಂದಲೇ ನಾನು ಲೇಬರ್ ಕಾಂಟ್ರಾಕ್ಟ ಕಛೇರಿಯನ್ನು ಓಪನ್ ಮಾಡಿದ್ದರು. 2016 ರಲ್ಲಿ ನಮ್ಮ ಸಂಸ್ಥೆಯು ಮುಚ್ಚಿರುತ್ತದೆ. ಸಾಕ್ಷಿಯು ನಮ್ಮ ಸಂಸ್ಥೆಯನ್ನು ಆರಂಭ ಮಾಡಿದ 6 ತಿಂಗಳಲ್ಲಿ ಯಾವುದೇ ವ್ಯವಹಾರ ಕುದುರಲಿಲ್ಲ ಆದ್ದರಿಂದ ಆಗಲೇ ಅದನ್ನು ಮುಚ್ಚಿಬಿಟ್ಟೆ ಎಂದು ನುಡಿಯುತ್ತಾರೆ. 6 ತಿಂಗಳೊಳಗೆ ನಮ್ಮ ಸಂಸ್ಥೆ ಮುಚ್ಚಿದ ಕೂಡಲೇ ಇ ಎಸ್ ಐ ಕೋಡನ್ನು ರದ್ದುಪಡಿಸಿ ಎಂದು ನಾನು ಅರ್ಜಿ ಕೊಟ್ಟಿರಲಿಲ್ಲ ಎಂಬುದು ನಿಜ. ಇ ಎಸ್ ಐ ಕೋಡ್ ಪಡೆಯಬೇಕಾದರೆ ಪ್ರತಿ ತಿಂಗಳು ವಂತಿಗೆಯನ್ನು ಪಾವತಿಸಬೇಕು ಎಂಬ ತಿಳುವಳಿಕೆ ನನಗೆ ಇತ್ತು. ನಮ್ಮ ಸಂಸ್ಥೆಯನ್ನು ಆರಂಭಿಸುವಾಗ ಎದುರುದಾರ ಸಂಸ್ಥೆ ಅಲ್ಲದೆ ಬೇರೆ ಸಂಸ್ಥೆಗಳಿಂದಲೂ ಅನುಮತಿ ಪಡೆದುಕೊಂಡಿದ್ದೇನೆ ಎಂದರೆ ನಿಜ. ಆ ರೀತಿ ಅನುಮತಿ ಪಡೆದುಕೊಂಡ ಕಛೇರಿಗಳಿಗೆ ನನ್ನ ಸಂಸ್ಥೆಯನ್ನು ಮುಚ್ಚಿದ ಬಗ್ಗೆ ಮಾಹಿತಿಯನ್ನು ನೀಡಿದ್ದೇನೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಕೊಟ್ಟಿದ್ದೇನೆ. ದಿಃ1-4-2013 ರಿಂದ 30-11-2017 ರವರೆಗೆ ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದು ದಿಃ17-1-2018 ರಂದು ನನಗೆ ಸಿ-18 ನೋಟೀಸನ್ನು ಕೊಟ್ಟರು ಎಂದರೆ ಸಾಕ್ಷಿಯು ಅದು ನನಗೆ ತಲುಪಿಲ್ಲ ಎನ್ನುತ್ತಾರೆ. ಅದೇರೀತಿಯಲ್ಲಿ ದಿಃ1-1-2017 ರಿಂದ 30-11-2017 ರವರೆಗೆ ಇ ಎಸ್ ಐ ವಂತಿಗೆಯನ್ನು ಕಟ್ಟಿಲ್ಲ ಎಂದು ಇನ್ನೊಂದು ಸಿ-18 ನೋಟೀಸನ್ನು ನನಗೆ ಕೊಟ್ಟರು ಎಂದರೆ ಸಾಕ್ಷಿ ಆ ಸಮಯದಲ್ಲಿ ನಾನು ಬೆಂಗಳೂರಿನಲ್ಲಿದ್ದೆ ಎಂದು ನುಡಿಯುತ್ತಾರೆ. ಆ ನೋಟೀಸಿನಲ್ಲಿ ದಿಃ2-2-2018 ರಂದು ನನಗೆ ಖುದ್ದು ಸುನಾವಣೆಗೆ ಹಾಜರಾಗಬೇಕೆಂದು ತಿಳಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಾಗಲಿಲ್ಲ ಎನ್ನುತ್ತಾರೆ. ಆನಂತರ 26-2-2018 ರಂದು ನನಗೆ ಇನ್ನೊಂದು ಖುದ್ದು ಸುನಾವಣೆಗಾಗಿ ನೋಟೀಸನ್ನು ಕಳುಹಿಸಿದ್ದರು ಎಂದರೆ ಸಾಕ್ಷಿ ಅದನ್ನು ನನ್ನ ತಾಯಿ ತೆಗೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಆ ಸುನಾವಣೆಗೆ ನಾನು ಹಾಜರಾಗಿರಲಿಲ್ಲ ಎಂದರೆ ಸಾಕ್ಷಿ ನಾನು ಪತ್ರ ಕೊಡಲು ಹೋಗಿದ್ದೆ ಆದರೆ ಕೋರ್ಟಿನಲ್ಲಿ ಈಗಾಗಲೇ ಕೇಸು ಹಾಕಿದ್ದೇವೆ ನೀವು ಅಲ್ಲೇ ನೋಡಿಕೊಳ್ಳಿ ಎಂದು ಹೇಳಿದರು ಎಂದು ನುಡಿಯುತ್ತಾರೆ.

ESI.A.No.24/2021
AW-1,

ಎದುರುದಾರರು ಹಾಕಿರುವ ಆ ಕೇಸ್ ನಂಬರ್ ನನಗೆ ಗೊತ್ತಿಲ್ಲ. 45 ಎ ಆದೇಶವಾದ ನಂತರ ನಾನು ನಿಶಾನೆ ಎ-3 ಮತ್ತು 4 ಪತ್ರಗಳನ್ನು ಕೊಟ್ಟಿದ್ದೇನೆ ಎಂದರೆ ಸಾಕ್ಷಿ ಮೊದಲೇ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. 45 ಎ ಆದೇಶವು ದಿಃ6-3-2018 ರಂದು ಆಗಿರುತ್ತದೆ ಎಂದರೆ ನಿಜ. ನಿಶಾನೆ ಎ-3 ಮತ್ತು 4 ರಲ್ಲಿ ಅನುಕ್ರಮವಾಗಿ 20-10-2018 ಮತ್ತು 9-7-2018 ದಿನಾಂಕಗಳು ಕಂಡುಬರುತ್ತವೆ ಎಂದರೆ ನಿಜ. ನಿಶಾನೆ ಎ-4 ದಾಖಲೆಯನ್ನು ನಾನೇ ಕೊಟ್ಟಿದ್ದೇನೆ ಎಂದರೆ ನಿಜ. ಆ ಪತ್ರದಲ್ಲಿ ಅದನ್ನು ಕೊಡುವ 3 ವರ್ಷಗಳ ಮುಂಚೆ ನನ್ನ ಸಂಸ್ಥೆ ಮುಚ್ಚಿರುತ್ತದೆ ಎಂದು ಹೇಳಿದ್ದೇನೆ ಎಂದರೆ ನಿಜ. ಸದರಿ ದಾಖಲೆ ಪ್ರಕಾರ 2015 ರ ನಂತರ ನನ್ನ ಸಂಸ್ಥೆಯನ್ನು ಮುಚ್ಚಿದ್ದೇನೆ ಎಂದರೆ ಸಾಕ್ಷಿ ಅದು ಮೊದಲೇ ಮುಚ್ಚಿತ್ತು ಆದರೆ ಪತ್ರವನ್ನು ಮಾತ್ರ ನಂತರ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. 45 ಎ ಆದೇಶದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿಲ್ಲ ಎಂಬುದು ನಿಜ. ನಾನು 45 ಎ ಆದೇಶವನ್ನು ಪಾಲಿಸಿಲ್ಲ ಎಂದು ನನ್ನ ವಿರುದ್ಧ ವಸೂಲಾತಿ ಪ್ರಕ್ರಿಯೆ ಆರಂಭಿಸಿದರು ಎಂದರೆ ನಿಜ. ನನ್ನ ಸಂಸ್ಥೆಯು ಈಗಲೂ ಅಸ್ತಿತ್ವದಲ್ಲಿದೆ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೇರೆ ಲೈಸನ್ಸುಗಳನ್ನು ಪಡೆದುಕೊಂಡಿರಲಿಲ್ಲ ಆದ್ದರಿಂದ ಅದನ್ನು ರದ್ದುಪಡಿಸುವ ಪ್ರಮೇಯ ಬರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.